ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ವಿರಾಜಪೇಟೆ
ಓಎಸ್ ನಂಃ ೧೯೨/೨೦೧೫

ದಿನಾಂಕಃ ೨೮-೦೩-೨೦೧೭ ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ- ಶ್ರೀ ಸಿ ಎಸ್ ಜೆ ವಕೀಲರಿಂದಃ-

ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಈ ದಿನ ನ್ಯಾಯಾಲಯದಲ್ಲಿ ಸಲ್ಲಿಸಿದ್ದು, ಅದರಲ್ಲಿಯ ಅಂಶಗಳು ಸತ್ಯವಾಗಿವೆ.

ನನ್ನ ಗಂಡನ ಮರಣ ಪ್ರಮಾಣಪತ್ರವನ್ನು ಹಾಜರ್ಪಡಿಸಿದ್ದು, ಅದನ್ನು ನಿಶಾನೆ ಪಿ-೧ ಎಂದು ಗುರುತಿಸಲಾಯಿತು. ದಾವಾಸ್ತಿಯ ತೆರಿಗೆ ರಿಜಿಸ್ಟರ್ ನಕಲನ್ನು ಹಾಜರ್ಪಡಿಸಿದ್ದು, ಅದನ್ನು ನಿಶಾನೆ ಪಿ-೨ ಎಂದು ಗುರುತಿಸಲಾಯಿತು. ಪೋಲೀಸರಿಗೆ ನೀಡಿದ ದೂರಿನ ಪ್ರತಿ ಹಾಗೂ ಪೋಲೀಸರು ನೀಡಿರುವ ಎರಡು ಹಿಂಬರಹಗಳನ್ನು ಹಾಜರ್ಪಡಿಸಿದ್ದು, ಅವುಗಳನ್ನು ನಿಶಾನೆ ಪಿ-೩ ರಿಂದ ೫ ಎಂದು ಗುರುತಿಸಲಾಯಿತು. ಪಟ್ಟಣ ಪಂಚಾಯ್ತಿಯವರು ನೀಡಿರುವ ವಾಸ ದೃಢೀಕರಣ ಪತ್ರವನ್ನು ಹಾಜರ್ಪಡಿಸಿದ್ದು, ಅದನ್ನು ನಿಶಾನೆ ಪಿ-೬ ಎಂದು ಗುರುತಿಸಲಾಯಿತು. ಪಡಿತರ ಚೀಟಿಯ ನೋಟರೈಸ್ಡ್ ಪ್ರತಿಯನ್ನು ಹಾಜರ್ಪಡಿಸಿದ್ದು, ಅದನ್ನು ನಿಶಾನೆ ಪಿ-೭ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ಹಾಜರ್ಪಡಿಸಿರುವ ಹಿಬಾ/ಗಿಫ್ಟ್ ಡೀಡ್‌ನ ಗುರುತು ಹಚ್ಚುವ ಬಗ್ಗೆ ತಕರಾರು ಇದ್ದು ಈ ಕುರಿತು ವಾದ ಕೇಳಲು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ
ಸಹಿಃ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂಃ ವಿರಾಜಪೇಟೆ.

ಸಾಕ್ಷಿದಾರರ ಸಹಿಃ